**Spl.C.5092/2021**
**PW.3 CW.3 Boji**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5092/2021**

**ಪ್ರಾಸಾ -- 3**

**ಚಾಸಾ .- 3**

ಸಾಕ್ಷಿಯ ಹೆಸರು – ಶ್ರೀಮತಿ ಬೋಜಿ
ಗಂಡನ ಹೆಸರು – ಜೋಗಿ
ವಯಸ್ಸು – 45 ವರ್ಷ
ವೃತ್ತಿ – ಕೂಲಿ
ವಿಳಾಸ – ನಾಲ್ಕೇರಿ ಬಣ್ಣನಮಟ್ಟೆ

ದಿಃ 21.08.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ಪ್ರಾಸಾ 1 ನನ್ನ ಪತಿ, ಪ್ರಾಸಾ 2 ಭಾವನ ಮಗ, ಚಾಸಾ 4 ಪ್ರಾಸಾ 2 ರವರ ಪತ್ನಿ. ಚಾಸಾ 5 ಗಣಪತಿ ನನ್ನ ಸಾಹುಕಾರರು. ನ್ಯಾಯಾಲಯದಲ್ಲಿರುವ ಎಲ್ಲಾ ಆರೋಪಿಗಳ ಪರಿಚಯ ಇದೆ.

2. ನಾಲ್ಕು ವರ್ಷದ ಹಿಂದೆ ಸಂಜೆ 4.00 ಗಂಟೆಯಲ್ಲಿ ನಾನು ಮನೆಯಲ್ಲಿದ್ದೆ, ಆ ಸಮಯದಲ್ಲಿ ಗಲಾಟೆಯ ಶಬ್ದ ಕೇಳಿಸಿತು, ಕೂಡಲೆ ಗಲಾಟೆಯ ಸ್ಥಳವಾದ ಭರತ್ ಅಂಗಡಿಯ ಬಳಿ ಹೋದೆವು. ಪ್ರಾಸಾ 1 ಮತ್ತು 2 ರವರು ಕುಟ್ಟ ಪೊಲೀಸ್ ಠಾಣೆಗೆ ಹೋಗಿ ವಿಚಾರಣೆ ಮುಗಿಸಿ ಬರುವಾಗ ಆರೋಪಿತರು ಅವರಿಗೆ ಹಲ್ಲೆ ಮಾಡಿದ್ದಾರೆ.

3. ನಾನು ನೋಡಿದಾಗ ಎಲ್ಲಾ ಆರೋಪಿತರು ಪ್ರಾಸಾ 1 ಮತ್ತು 2 ರವರು ಆಟೋದಲ್ಲಿ ಕುಳಿತಿದ್ದಾಗ ಹಲ್ಲೆ ಮಾಡಿದ್ದಾರೆ. ನಾನು

ಹಾಗೂ ಚಾಸಾ 4 ರವರು ತಡೆಯಲು ಹೋದಾಗ ನನ್ನ ತಲೆಗೆ ಮತ್ತು ಎದೆಗೆ 7 ಜನ ಹಲ್ಲೆ ಮಾಡಿದ್ದಾರೆ. ನಮ್ಮನ್ನು ಚರಂಡಿಗೆ ತಳ್ಳಿ ಕಾಲಿನಿಂದ ಒದ್ದಿದ್ದಾರೆ. ಪ್ರಾಸಾ 1 ಮತ್ತು 2 ರವರು ಓಡಿ ಹೋಗಿದ್ದಾರೆ, ಬೇರೆಯವರು ಯಾರೂ ಬಂದಿಲ್ಲ. ಬೇರೆಯವರು ನಿಂತು ನೋಡುತ್ತಿದ್ದರು. ಕೆಟ್ಟ ಮಾತುಗಳಿಂದ ನಮಗೆ ಬೈದಿದ್ದಾರೆ. ಯರವರಿಗೆ ಹಲ್ಲೆ ಮಾಡಬೇಕು ಎಂದು ಬೈದಿದ್ದಾರೆ, ನಾವು ಎರವ ಜಾತಿಗೆ ಸೇರಿದ್ದೇವೆ. ಆರೋಪಿತರು ಕೊಡವ ಜಾತಿಗೆ ಸೇರಿದ್ದಾರೆ. ನಂತರ ಠಾಣೆಗೆ ಹೋಗಿ ದೂರು ನೀಡಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇವೆ. ಪೊಲೀಸರು ವಿಚಾರಣೆ ಮಾಡಿದ್ದಾರೆ.

4. ನಿಪಿ 3 ಪೋಟೋದಲ್ಲಿ ಕಾಣುವ ಜಾಗದಲ್ಲಿ ಗಲಾಟೆ ಆಗಿದೆ. ಮತ್ತೆ ಎಲ್ಲಿ ಹೇಳಿಕೆ ನೀಡಿದ್ದೇನೆ ಎಂದು 4 ವರ್ಷವಾದ ಕಾರಣ ನೆನಪಿಲ್ಲ. 164 ಸಿ ಆರ್ ಪಿ ಸಿ ಹೇಳಿಕೆಯನ್ನು **ನಿಪಿ 6, 6(ಎ)** ನನ್ನ ರುಜು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

5. ಆರೋಪಿತರು ನಮ್ಮನ್ನು ಜಾತಿನಿಂದನೆ ಮಾಡಿದ್ದರಿಂದ ನಮಗೆ ಅವಮಾನ ಆಗಿ ಮಾನಕ್ಕೆ ಚ್ಯುತಿ ಬಂದಿದೆ ಎಂದು ಹೇಳಿದ್ದೇನೆ. ಪೊನ್ನಂಪೇಟೆ ನ್ಯಾಯಾಲಯದಲ್ಲಿ ಸಹ ನಾನು ಹಾಗೂ ಪ್ರಾಸಾ 1, 2 ಮತ್ತು ಚಾಸಾ 4 ರವರು ಹೇಳಿಕೆ ನೀಡಿದ್ದೇವೆ.

**ಪಾಟೀ ಸವಾಲುಃ ಶ್ರೀ ವಿ ಎಸ್ ಪಿ ಆರೋಪಿ ಪರ ವಕೀಲರಿಂದ ಇಲ್ಲ**.

6. ಘಟನಾ ಸ್ಥಳದಿಂದ ನಮ್ಮ ಮನೆಗೆ 800 ಮೀಟರ್ ಅಂತರ ಇರುವುದು ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಪ್ರಾಸಾ 1 ಮತ್ತು 2 ರವರು ಇದ್ದರು, ನಾವು ಬಿಡಿಸುವಾಗ ಅವರು ಹಾಗೂ ಆಟೋ ಹೊರಟು ಹೋಗಿದ್ದಾರೆ. ನಾವು ಅಲ್ಲಿಗೆ ಹೋದಮೇಲೆ ಓಡಿ ಹೋಗಿದ್ದಾರೆ. ನನಗೆ ಎಲ್ಲಾ ಆರೋಪಿತರು ಹಲ್ಲೆ ಮಾಡಿದ್ದಾರೆ. ನನಗೆ 25 ಹೊಡೆತ ಬಿದ್ದಿದೆ. ನನ್ನ ತಲೆಗೆ ಪೆಟ್ಟಾಗಿತ್ತು, ರಕ್ತ ಬಂದಿಲ್ಲ. ಘಟನೆಯ ಸಮಯದಲ್ಲಿ ಮಳೆ ಬರುತ್ತಿತ್ತು. ನನ್ನ ಬಟ್ಟೆ ಒದ್ದೆಯಾಗಿ ಮಣ್ಣು ಹತ್ತಿತ್ತು. ಒದ್ದ ಗುರುತು ಬಟ್ಟೆಗಳ ಮೇಲೆ ಇತ್ತು. ಚಾಸಾ 4 ರವರಿಗೂ ಸಹ ಚರಂಡಿಗೆ ಹಾಕಿ ಒದ್ದಿದ್ದಾರೆ, ಅವರಿಗೂ ಸಹ ರಕ್ತ ಬಂದಿಲ್ಲ. ಬಣ್ಣಮಟ್ಟೆಗೆ ಹೋಗುವ ರಸ್ತೆಯಲ್ಲಿ ಘಟನೆ ನಡೆದಿದೆ. ಮನೆಯಿಂದ ಘಟನಾ ಸ್ಥಳಕ್ಕೆ ಹೋಗುವ ಬಲಗಡೆಯ ಚರಂಡಿಗೆ ತಳ್ಳಿ ಹಲ್ಲೆ ಮಾಡಿದ್ದಾರೆ. ಸ್ಥಳದಲ್ಲಿ ಎರಡೂ ಬದಿ ಕಾಫಿ ತೋಟ ಇದೆ. ಗಲಾಟೆಯಾದ ಅರ್ಧ ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದಿದ್ದಾರೆ. ಪೊಲೀಸರಿಗೆ ನಾವು ಹಲ್ಲೆ ಮಾಡಿದ ಜಾಗವನ್ನು ತೋರಿಸಿದ್ದೇವೆ. ಗಾಯಗಳನ್ನು ಸಹ ತೋರಿಸಿದ್ದೇವೆ. ಅದನ್ನು ಬರೆದುಕೊಂಡಿದ್ದಾರೆ. ಬೇರೆಯವರ ವಿಚಾರಣೆ ಮಾಡಿ ಹೇಳಿಕೆಯನ್ನು ಮಾಡಿಕೊಂಡಿಲ್ಲ, ಯಾರೂ ಇರಲಿಲ್ಲ.

7. ಇಬ್ಬರು ಪೊಲೀಸರು ಜೀಪ್ ನಲ್ಲಿ ಸ್ಥಳಕ್ಕೆ ಬಂದಿದ್ದರು. ಪ್ರಕರಣಕ್ಕೆ ಸಂಬಂಧಪಟ್ಟಂತೆ ಅದೇ ದಿನ ಹಾಗೂ ಮರುದಿನ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಪೊಲೀಸರು ವಿಚಾರಣೆ

ಮಾಡಿದ್ದಾರೆ. ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದಾರೆ. ಗಲಾಟೆಯ ದಿನ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಪೊನ್ನಂಪೇಟೆ ನ್ಯಾಯಾಲಯಕ್ಕೆ ಯಾವಾಗ ಹೋಗಿದ್ದೇನೆ ಎಂದು ನೆನಪಿಲ್ಲ. ಓದಿ ಹೇಳಿದ್ದನ್ನು ತಿಳಿದು ಸಹಿ ಮಾಡಿದ್ದೇನೆ. ನನ್ನ ಬಟ್ಟೆ ಹರೆದಿಲ್ಲ. ಪೊಲೀಸರು ನನ್ನ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ಗ್ರಾಮ ಪಂಚಾಯ ಸದಸ್ಯೆ. ಈ ಮೊದಲು ಪೊಲೀಸ್ ಠಾಣೆಗೆ ನಾನು ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೋಗಿಲ್ಲ. ಗಣೇಶ ಹಾಗೂ ಮೊಣ್ಣಿ ರವರಿಗೆ ಸಂಬಂಧಪಟ್ಟಂತ ಪ್ರಕರಣದಲ್ಲಿ ಪೊಲೀಸ್ ಠಾಣೆಗೆ ಹೋಗಿಲ್ಲ. ಚಾಸಾ 5 ರವರ ತೋಟಕ್ಕೆ ಕೆಲಸಕ್ಕೆ ಹೋಗುತ್ತೇನೆ. ಅವರು ಹೇಳಿದಂತೆ ಕೇಳುತ್ತೇನೆ. ಅವರ ಬಳಿ ನಮ್ಮ ಸಾಲ ಇದೆ. ಒಂದನೇ ಆರೋಪಿ ಹಾಗೂ ಚಾಸಾ 5 ರವರು ಸೋದರ ಸಂಬಂಧಿಗಳು. ಅವರ ನಡುವೆ ವೈಮನಸ್ಸು ಇರುವುದು ಗೊತ್ತಿರುವುದಿಲ್ಲ. ಚಾಸಾ 5 ರವರು ಹೇಳಿದಂತೆ ಸುಳ್ಳು ಪ್ರಕರಣ ನೀಡಿ, ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)